ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ. ಮಲ್ಲೇಶ್ವರಂ. ಬೆಂಗಳೂರು-12

ಸಂಖ್ಯೆ:ಪಪೂಶಿಇ/ಶೈ.ಶಾ- 05/ಪಮುಕಾವಾಭಾ/2013-14 ದಿನಾಂಕ: 23-06-2015

# ಸುತ್ತೋಲೆ

ವಿಷಯ: ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ಬೋಧನಾ ಅವಧಿ ನಿಗದಿಪಡಿಸಿರುವ ಕುರಿತು.

ಉಲ್ಲೇಖ: ಇಡಿ 97 ಟಿಪಿಯು 2011,ಬೆಂಗಳೂರು ದಿನಾಂಕ: 07-12-2011

ಮೇಲ್ಕಂಡ ಉಲ್ಲೇಖದನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪಿಸಿಎಂಬಿ ವಿಷಯಗಳಲ್ಲಿ ಕ್ರಮವಾಗಿ 2012-13 ಮತ್ತು 2013-14 ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಪಠ್ಯಕ್ರಮಕ್ಕನುಗುಣವಾಗಿ ಹಾಗೂ 2013-14 ಮತ್ತು 2014-15 ನೇ ಶೈಕ್ಷಣಿಕ ಸಾಲಿನಲ್ಲಿ ಕ್ರಮವಾಗಿ ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿಯ ಭಾಷಾ, ಕಲಾ, ವಾಣಿಜ್ಯ ಹಾಗೂ ಪಿಸಿಎಂಬಿ ಹೊರತುಪಡಿಸಿದ ಇತರೆ ವಿಜ್ಞಾನ ವಿಷಯಗಳಲ್ಲಿ ಹೊಸ ಪಠ್ಯಕ್ರಮಕ್ಕನುಗುಣವಾಗಿ ಇಲಾಖೆಯು ಪಠ್ಯಪುಸ್ತಕಗಳನ್ನು ಸಿದ್ದಪಡಿಸಿ ಜಾರಿಗೊಳಿಸಿದೆ.

- ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಕವಿಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಗೃಹವಿಜ್ಞಾನ ವಿಷಯಗಳ ಎಲ್ಲಾ ಉಪನ್ಯಾಸಕರು ವಾರದಲ್ಲಿ ಪ್ರತಿ ವರ್ಗಕ್ಕೆ 04 ಗಂಟೆಗಳ ಥಿಯರಿ ಹಾಗೂ 02 ಗಂಟೆಗಳ ಪ್ರಾಯೋಗಿಕ ತರಗತಿಗಳಂತೆ ಬೋಧನೆ ಮಾಡುವುದು.
- ಗಣಿತಶಾಸ್ತ್ರ ಬೋಧಿಸುವ ಉಪನ್ಯಾಸಕರು ಪ್ರತೀ ವರ್ಗಕ್ಕೆ ವಾರದಲ್ಲಿ 06 ಗಂಟೆಗಳ ಬೋಧನೆ ಮಾಡುವುದು.
- ಪ್ರಾಯೋಗಿಕ ತರಗತಿಗಳನ್ನು ಹೊರತುಪಡಿಸಿದ ಇತರೆ ವಿಷಯಗಳಲ್ಲಿ ಎಲ್ಲಾ ಉಪನ್ಯಾಸಕರು ವಾರದಲ್ಲಿ ಪ್ರತೀ ವರ್ಗಕ್ಕೆ 4 ಗಂಟೆಗಳ ಬೋಧನೆ ಮಾಡುವುದು ಹಾಗೂ ಒಂದು (01) ಅವಧಿಯಲ್ಲಿ ವಿದ್ಯಾರ್ಥಿಗಳಿಂದ ವಿಚಾರ ಸಂಕಿರಣ, ಪ್ರಾಯೋಗಿಕ ಚಟುವಟಿಕೆ,ಸಂಪನ್ಮೂಲ ವ್ಯಕ್ತಿಗಳಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಇತ್ಯಾದಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವುದು. ಇದರಂತೆ ಸಿದ್ದಪಡಿಸಿದ ವೇಳಾಪಟ್ಟಿಯನ್ನು ಪ್ರಾಂಶುಪಾಲರು ದೃಢೀಕರಿಸುವುದು ಮತ್ತು ಅನುಪಾಲನೆ ಮಾಡುವುದು.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1) ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು
2) ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳ ಮೂಲಕ ಮುಂದಿನ ಕ್ರಮಕ್ಕಾಗಿ
3) ಜಂಟಿ ನಿರ್ದೇಶಕರು (ಆಡಳಿತ/ ಪರೀಕ್ಷೆ/ ಮಾನ್ಯತೆ/ಆರ್.ಐ.ಡಿ.ಎಫ್) ಪ.ಪೂ.ಶಿ.ಇ-ಮಾಹಿತಿಗಾಗಿ
4) ಸಹಾಯಕ ನಿರ್ದೇಶಕರು, ಇ-ಆಡಳಿತ ಪ.ಪೂ.ಶಿ.ಇ ಅಂತರ್ಜಾಲದಲ್ಲಿ ಅಳವಡಿಸಲು